ದಿನಾಂಕಃ **17-03-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 4 ರವರ ಪರ ಶ್ರೀ ಟಿ ಜಿ ವಕೀಲರಿಂದ,

1) ನಾನು ನಿಪಿ 14 ಮತ್ತು 18 ಕ್ರಯ ಕರಾರು ಪತ್ರಗಳಿಗೆ ಸಹಿ ಮಾಡಿದ್ದೇನೆ ಹೊರತು ಇತರೆ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ. ವಾದಿಯ ಗಂಡ ನನಗೆ ಭಾಮೈದ ಆಗಬೇಕು. ನಾನು ಕರಾರು ಪತ್ರಗಳಿಗೆ ದಾವೆ ಸಲ್ಲಿಸುವ ಕಾಲಕ್ಕೆ ವಾದಿಯ ಗಂಡನ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರಗಳಲ್ಲಿ ಬರೆದಿರುವ ವಿಷಯದ ಬಗ್ಗೆ ಸಾಧಾರಣವಾಗಿ ಗೊತ್ತಿರುತ್ತದೆ. ನಿಪಿ 14 ಕರಾರು ಪತ್ರದಡಿಯಲ್ಲಿ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನವನ್ನು ತನ್ನ ಬಳಿ ಉಳಿಸಿಕೊಂಡಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ 14 ಕರಾರು ಪತ್ರದಲ್ಲಿ ಎಷ್ಟು ಅವಧಿಗೆ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 14 ಕರಾರು ಪತ್ರದಲ್ಲಿ ಒಂದು ವರ್ಷದ ಒಳಗಾಗಿ ಕ್ರಯ ಪತ್ರವನ್ನು ನೊಂದಣಿ ಮಾಡಿಸಿಬೇಕು ಎಂದು ಷರತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2) ಒಂದು ವರ್ಷದ ಒಳಗೆ ಕ್ರಯ ಪತ್ರ ನೊಂದಣಿ ಮಾಡಿಸಿಕೊಳ್ಳದ ಕಾರಣ 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಿಃ 09-04-2018 ರಂದು ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ವಾದಿಯ ಗಂಡ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿ.

3) ನಿಪಿ 18 ಕರಾರು ಪತ್ರಕ್ಕೆ ನಾನು ದಿಃ 16-12-2017 ರಂದು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನಿಪಿ 18 ಕರಾರು ಪತ್ರ ತಯಾರು ಮಾಡಲು 1 ನೇ ಪ್ರತಿವಾದಿ ಮತ್ತು ವಾದಿ, ವಾದಿಯ ಗಂಡ ನೀಡಿರುತ್ತಾರೆ. ನಿಪಿ 18 ಕರಾರು ಪತ್ರದಲ್ಲಿ ನಿಪಿ 14 ಕರಾರು ಪತ್ರದ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 18 ಛಾಪಾ ಕಾಗದವನ್ನು ದಿಃ 16-12-2017 ರಂದು ಶಿವಣ್ಣ ಮತ್ತು ವಾದಿ ಖರೀದಿ ಮಾಡಿರುತ್ತಾರೆ. ನಿಪಿ 18 ಕರಾರು ಪತ್ರವನ್ನು ನಾನು ಮತ್ತು ವಾದಿ ಗಂಡ ಸೃಷ್ಟಿ ಮಾಡಿರುತ್ತೇವೆ ಎಂದರೆ

ಸರಿಯಲ್ಲ. ನಿಪಿ 18 ಕರಾರು ಪತ್ರಕ್ಕೆ ಪ್ರತಿವಾದಿ 1 ರಿಂದ 3 ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಿಪಿ 14 ಮತ್ತು 18 ಕರಾರು ಪತತ್ರಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ಗಂಡನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ